ರುಚಿಕರವಾದ ಉಪಹಾರ
ಸಿಹಿ – ಖಾರ ತಿಂಡಿಗಳು
ನ್ಯೂ ಶೋರ್ಟ್ ರೆಸ್ಟೋರೆಂಟ್
ಹೊಸ ಬಸ್‌ಸ್ಟ್ಯಾಂಡ್ ಬಳಿ
ಕುಂದಾಪುರ
ಫೋ : 232878

www.kundaprabha.com e-mail : kundaprabha@gmail.com

# ಕುಂದಪ್ರಭ

ವಾರಪತ್ರಿಕೆ

SJ ಸ್ಥಾಪನೆ : 1946
6 ದಶಕಗಳ
ವಿಶ್ವಾಸನೀಯ ಸೇವೆಯಲ್ಲಿ
ಶೇಟ್ ಜ್ಯುವೆಲ್ಲರ್ಸ್
ಶಂಕರ್ ಶೇಟ್ ಬಿಲ್ಡಿಂಗ್
ಮುಖ್ಯರಸ್ತೆ, ಕುಂದಾಪುರ
ಫೋನ್ : 230242

॥ ಸಂಪುಟ : 26 ॥ ಸಂಚಿಕೆ : 44 Udp/1263/2015-17 || R.NO.50495/91 ॥ ತಾರೀಕು : 29–11–2016 ॥ ರೂ 5/– ॥ ವಾರ್ಷಿಕ ಚಂದಾ : 300/– ಅಂಚೆಯಲ್ಲಿ : 350/

## ಕುಂದಾಪುರದಲ್ಲಿ ಆಕ್ರೋಶವಿಲ್ಲ

ನೋಟು ರದ್ದತಿ ವಿರುದ್ಧ ಕಾಂಗ್ರೆಸ್ ಹಾಗೂ ಎಡಪಕ್ಷಗಳು ಕರೆ ನೀಡಿದ್ದ "ಆಕ್ರೋಶ್ ದಿವಸ" ದ ಪರಿಣಾಮ ಕುಂದಾಪುರ ತಾಲೂಕಿನ ಎಲ್ಲೂ ಕಂಡು ಬಂದಿಲ್ಲ.

ಕುಂದಾಪುರದಲ್ಲಿ ಕುಂದೇಶ್ವರ ದೀಪೋತ್ಸವ ಸಂಭ್ರಮವೂ ಇರುವುದರಿಂದ ಮುಖ್ಯ ಬೀದಿ ತುಂಬ ಜಾತ್ರೆ ಅಂಗಡಿಗಳೇ ತುಂಬಿ ಹೋಗಿ ವಾತಾವರಣ ಬೇರೆಯದ್ದೇ ಆಗಿತ್ತು. ಜನರ ಓಡಾಟ ಎಂದಿಗಿಂತ ಜಾಸ್ತಿ ಇತ್ತು.

"ಆಕ್ರೋಶ" ದಿವಸ್ ನಡೆಸಲು ಉದ್ದೇಶಿಸಿದ ಪಕ್ಷದ ನಾಯಕರು ಕಾರ್ಯಕರ್ತರು ಹಿಂದಿನ ದಿನವಾಗಲಿ, ತಾ. 28 ರ ದಿನವಾಗಲಿ ಜನರಲ್ಲಿ ಮನವಿ ಮಾಡಲಾಗಲಿ, ಒತ್ತಾಯಿಸಲಾಗಲಿ ಪ್ರಯತ್ನ ನಡೆಸಲಿಲ್ಲ. ಬಂದ್‌ಗೆ ಬೆಂಬಲ ನೀಡದಂತೆ ಸಾಮಾಜಿಕ ಜಾಲ ತಾಣಗಳಲ್ಲಿ ವಾಟ್ಸ್‌ಆಫ್ ಗ್ರೂಫ್‌ನಲ್ಲಿ ಪ್ರಚಾರ ಭರ್ಜರಿಯಾಗಿತ್ತು. ಬ್ಯಾಂಕ್, ಎ.ಟಿ.ಎಂ. ಗಳಲ್ಲಿ ಎಂದಿನ ಜನ ಜಂಗುಳಿ ಇರಲಿಲ್ಲ. ಕೆಲವು ಎ.ಟಿ.ಎಂ. ಗಳಲ್ಲಿ ಹಣವೂ ಬಂದಿರಲಿಲ್ಲ.

ಕುಂದಾಪುರದಲ್ಲಿ ಜನಜೀವನ ಎಂದಿನಂತೆ ಇದ್ದು ವಾಹನಗಳು ಓಡಾಡಿಕೊಂಡಿದ್ದವು.

## ಜನಸಾಮಾನ್ಯರಿಗೆ ತೊಂದರೆ ಕಾಂಗ್ರೆಸ್ ಪ್ರತಿಭಟನೆ

ಕಾಳಧನ ನಿಯಂತ್ರಿಸಲು ನೋಟು ರದ್ಧತಿ ಮಾಡಿರುವ ಬಗ್ಗೆ ನಮ್ಮ ವಿರೋಧವಿಲ್ಲ. ಆದರೆ ಸೂಕ್ತ ಸಿದ್ಧತೆ ಮಾಡಿಕೊಳ್ಳದೇ ಜನಸಾಮಾನ್ಯರಿಗೆ ತೊಂದರೆಯಾಗುವ ರೀತಿಯಲ್ಲಿ ಅವ್ಯವಸ್ಥೆ ಆಗಿರುವುದಕ್ಕೆ ನಮ್ಮ ವಿರೋಧವಿದೆ. ಸರ್ವಾಧಿಕಾರಿಯ ರೀತಿಯಲ್ಲಿ ಪ್ರಧಾನಿ ವರ್ತಿಸುತ್ತಿದ್ದಾರೆ. ಅವರು ಇನ್ನು ಮುಂದೆಯಾದರೂ ಸೂಕ್ತ ಕ್ರಮ ಕೈಗೊಂಡು ಆಗಿರುವ ಸಮಸ್ಯೆ ಪರಿಹರಿಸದಿದ್ದಲ್ಲಿ ಉಗ್ರ ಹೋರಾಟ ಮಾಡುತ್ತೇವೆ ಎಂದು ಕುಂದಾಪುರ ಬ್ಲಾಕ್ ಕಾಂಗ್ರೆಸ್ ಎಚ್ಚರಿಸಿದೆ.

ಕುಂದಾಪುರ ಶಾಸ್ತ್ರಿ ವೃತ್ತದಲ್ಲಿ ಕುಂದಾಪುರ ವಿಧಾನ ಸಭಾ ಕ್ಷೇತ್ರದ ಅಧ್ಯಕ್ಷ ಶಿವರಾಮ ಶೆಟ್ಟಿ ಮಲ್ಯಾಡಿ ಹಾಗೂ ಹಿರಿಯ ನಾಯಕ ಹಿರಿಯಣ್ಣ ಅವರ ನೇತ್ರತ್ವದಲ್ಲಿ ನಡೆದ ಪ್ರತಿಭಟನಾ ಸಭೆಯಲ್ಲಿ ಕಾಂಗ್ರೆಸ್ ಪಕ್ಷದ ಪುರಸಭಾ ಸದಸ್ಯರು ಯುವ ಕಾಂಗ್ರೆಸ್ ನಾಯಕರು ಮಹಿಳಾ ವಿಭಾಗದ ನಾಯಕರು ಹಾಗೂ ವಿವಿಧ ಗ್ರಾಮಗಳಿಂದ ಆಗಮಿಸಿದ ಕಾರ್ಯಕರ್ತರು ಭಾಗವಹಿಸಿದ್ದರು. ಬೆಳಿಗ್ಗೆ 10.30 ರಿಂದ ಒಂದು ಗಂಟೆಕಾಲ ಈ ಪ್ರತಿಭಟನಾ ಕಾರ್ಯಕ್ರಮ ನಡೆಯಿತು.

ಪಕ್ಷದ ಸೂಚನೆಯಂತೆ ಕಾರ್ಯಕ್ರಮ ನಡೆಸಿದ್ದೇವೆ ಎಂದು ಅಧ್ಯಕ್ಷ ಶಿವರಾಮ ಶೆಟ್ಟಿ ಹೇಳಿದ್ದಾರೆ

## ಧರ್ಮಸ್ಥಳದಲ್ಲಿ ಸಂಭ್ರಮದ ಲಕ್ಷ ದೀಪೋತ್ಸವ



ಶ್ರೀ ಕ್ಷೇತ್ರ ಧರ್ಮಸ್ಥಳದಲ್ಲಿ ನ.24 ರಿಂದ ಆರಂಭಗೊಂಡ ಲಕ್ಷ ದೀಪೋತ್ಸವ ಸಂಭ್ರಮದಿಂದ ನಡೆಯುತ್ತಿದೆ. ಧಾರ್ಮಿಕ ಉತ್ಸವಗಳು , ಸಾಂಸ್ಕೃತಿಕ ಕಾರ್ಯಕ್ರಮಗಳು ಹಾಗೂ ಧರ್ಮಸ್ಥಳದ ಶ್ರೀ ಮಂಜುನಾಥನ ದರ್ಶನಕ್ಕೆ ಆಗಮಿಸಿದ ಲಕ್ಷಾಂತರ ಮಂದಿ ದೀಪೋತ್ಸವದಲ್ಲಿ ಪಾಲ್ಗೊಂಡು ಸಂಭ್ರಮ ಪಟ್ಟರು. ಲಕ್ಷ ದೀಪೋತ್ಸವದ ಅಂಗವಾಗಿ ನಡೆದ ಸರ್ವಧರ್ಮ ಸಮ್ಮೇಳನ ಅರ್ಥಪೂರ್ಣವಾಗಿ ನಡೆಯಿತು.

### ಎಲ್ಲಾ ಧರ್ಮವನ್ನೂ ಗೌರವಿಸಿ : ನ್ಯಾ। ಗೋಪಾಲ ಗೌಡ

"ಬಹುಮತೀಯ ರಾಷ್ಟ್ರದಲ್ಲಿ ಎಲ್ಲಾ ಧರ್ಮಗಳಿಗೂ ಗೌರವ ಇದೆ. ಎಲ್ಲಾ ಮತೀಯ ವಿಚಾರಗಳನ್ನು ಗೌರವಿಸಬೇಕು ಸಮಾನ ನಾಗರಿಕ ಸಂಹಿತೆ ಜಾರಿಯ ಹಾದಿ ಸುಗಮ ಇದ್ದು ಸಮಾನ ನಾಗರಿಕತೆ ಸಂಹಿತೆ ಶಾಸಕಾಂಗದ ಹೊಣೆ ಎಂದು ಸುಪ್ರಿಂ ಕೋರ್ಟ್‌ನ ನಿವೃತ್ತ ನ್ಯಾಯಮೂರ್ತಿ ವಿ.ಗೋಪಾಲ ಗೌಡ ಹೇಳಿದ್ದಾರೆ.

ಅವರು ರವಿವಾರ ಧರ್ಮಸ್ಥಳದ ಅಮೃತವರ್ಷಿಣಿ ಸಭಾಭವನದಲ್ಲಿ ಲಕ್ಷದೀಪೋತ್ಸವ

(6ನೇ ಪುಟಕ್ಕೆ)

## ಕುಂದಾಪುರದಲ್ಲಿ ಸಂಭ್ರಮದ ಕಾರ್ಟೂನ್ ಹಬ್ಬ



ನೂರಾರು ವರ್ಷ ಇತಿಹಾಸವಿರುವ ಕಾರ್ಟೂನ್ ಕಲೆಯಲ್ಲಿ ಪ್ರತಿಭಾನ್ವಿತರಾಗಿರುವ ಕಲಾವಿದರು ಕುಂದಾಪುರದಲ್ಲಿ ಇದ್ದು ಈ ಕಲೆಗೆ ಸಾರ್ವಜನಿಕ ಮಹತ್ವ ನೀಡಿ ಯುವಜನರನ್ನು ಆಕರ್ಷಿಸಲು ಏರ್ಪಡಿಸಿದ ಕಾರ್ಟೂನ್ ಹಬ್ಬ ಉತ್ತಮ ಪ್ರತಿಕ್ರಿಯೆ ಪಡೆದಿದೆ. ಕಾರ್ಟೂನ್ ಪ್ರದರ್ಶನ , ಸ್ಪರ್ಧೆ ಹಾಗೂ ತರಬೇತಿ ಕಾರ್ಯಕ್ರಮಗಳಲ್ಲಿ ದಿನನಿತ್ಯವೂ ನೂರಾರು ಮಂದಿ ಆಗಮಿಸಿ ಸಂತೋಷಪಟ್ಟರು. ಅಂತಾರಾಷ್ಟ್ರೀಯ ಮಟ್ಟದ ಖ್ಯಾತರಾದ ಕಾರ್ಟೂನ್ ಕಲಾವಿದರು ಸೇರಿ ಕುಂದಾಪುರದಲ್ಲಿ ಬೇರೆ ಬೇರೆ ವೃತ್ತಿಯಲ್ಲಿ ಇದ್ದು ಹವ್ಯಾಸಿ ಚಿತ್ರಕಾರರಾಗಿ ಹೆಸರುವಾಸಿಯಾಗಿರುವ ಕಲಾವಿದರು ಒಗ್ಗೂಡಿ ನಡೆಸಿದ ಪ್ರಯತ್ನ ಯಶಸ್ವಿಯಾಗಿದೆ.

ಯಾವುದೇ ವಿದ್ಯಮಾನವನ್ನೂ ಸೂಕ್ಷ್ಮವಾಗಿ ಅವಲೋಕಿಸಿ ತೀಕ್ಷ್ಣ ಗೆರೆಗಳ ಮೂಲಕ ಚಿತ್ರಿಸುವ ಬುದ್ಧಿಮತ್ತೆ, ಪ್ರತಿಭೆ ಹಾಗೂ ಸಾಮರ್ಥ್ಯ ವ್ಯಂಗ್ಯಚಿತ್ರಕಾರರಿಗಿದೆ. ಪುಟಗಳಲ್ಲಿ ಹೇಳಬೇಕಾದ್ದನ್ನು ಚಿಕ್ಕ ಕಾರ್ಟೂನು ತಿಳಿಸುತ್ತದೆ. ಹಾಗಾಗಿಯೇ ಇಂದಿಗೂ ಕಾರ್ಟೂನು ಅಭಿವ್ಯಕ್ತಿಯ ಪ್ರಬಲ ಮಾಧ್ಯಮವಾಗಿ ಉಳಿದುಕೊಂಡಿದೆ ಎಂದು ಚಿಕ್ಕಮಂಗಳೂರು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕೆ. ಅಣ್ಣಾಮಲೈ ಹೇಳಿದರು

ಕುಂದಾಪುರ ಕಲಾಮಂದಿರದಲ್ಲಿ ಕಾರ್ಟೂನು ಕುಂದಾಪ್ರ ಸಾರಥ್ಯದಲ್ಲಿ ವಿಭಿನ್ನ ಐಡಿಯಾಸ್, ಟಿಎನ್‌ಎಸ್ 'ಕಾರ್ಟೂನು ಹಬ್ಬ' ಕಾರ್ಯಕ್ರಮಕ್ಕೆ 'ಥಿಂಕ್, ಲಾಫ್ ಎಂಜಾಯ್' ಎಂಬ ಪಾಸ್‌ವರ್ಡ್ ಬರೆಯುವ ಮೂಲಕ ಚಾಲನೆ ನೀಡಿ ಮಾತನಾಡಿದರು.

ನಮ್ಮ ಒಂದು ಕ್ಷಣದ ನಗುವಿನ ಹಿಂದೆ ವ್ಯಂಗ್ಯಚಿತ್ರಕಾರರ ಹಲವು ಗಂಟೆಗಳ ಆಲೋಚನೆ ಹಾಗೂ ಶ್ರಮವಿದೆ. ಎಲ್ಲವನ್ನೂ ಭಿನ್ನವಾಗಿ ನೋಡುವ ದೃಷ್ಟಿಕೋನವೇ ಅವರಲ್ಲಿನ ಭಿನ್ನ ಆಲೋಚನೆಗಳಿಗೆ ಕಾರಣವಾಗುತ್ತದೆ ಎಂದರು.

ಭಾರತವು ಹಲವು ವೈರುಧ್ಯಗಳ ದೇಶ. ವ್ಯಂಗ್ಯಚಿತ್ರಕಾರ ಎಲ್ಲವನ್ನೂ ಮೀರಿ, ಹಲವು ಗಡಿಗಳನ್ನು ದಾಟಿ ಬರುತ್ತಾನೆ. ಇದು ಸಹಜವಾಗಿ ಪರ ಪ್ರತಿರೋಧಗಳಿಗೆ ಕಾರಣವಾಗುತ್ತದೆ. ಇಂತಹ ಸಂದರ್ಭದಲ್ಲಿ ನಾವು ವ್ಯಂಗ್ಯಚಿತ್ರಕಾರರ ಬೆಂಬಲಕ್ಕೆ ನಿಲ್ಲಬೇಕಿದೆ. ಅವರ ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ಪ್ರೋತ್ಸಾಹಿಸಿ ಅವರಲ್ಲಿನ ಕಾರ್ಟೂನ್ ಹ್ಯೂಮರ್ ಸಾಯಲು ಬಿಡಬಾರದು ಎಂದರು.

ಉಡುಪಿ ಬಾಳಿಗಾ ಆಸ್ಪತ್ರೆಯ ಖ್ಯಾತ ಮನೋವೈದ್ಯ ಡಾ. ಪಿ.ವಿ ಭಂಡಾರಿ ಮಾತನಾಡಿ ಎಂಬಿಎ ಮುಗಿಸಿದ್ದರೂ ಬದುಕಿನ ಹಾದಿಯನ್ನು ಬದಲಿಸಿಕೊಂಡು ಕಾರ್ಟೂನು ಕಲೆಯನ್ನು ವೃತ್ತಿಯಾಗಿ ತೆಗೆದುಕೊಂಡ ಸತೀಶ್ ಆಚಾರ್ಯ ಅವರ ನಿರ್ಣಯವೇ ದೊಡ್ಡದು. ಇದರ ನಡುವೆಯೇ ಯಶಸ್ಸಿನ ಉತ್ತುಂಗದಲ್ಲಿದ್ದ ಸತೀಶ್ ಆಚಾರ್ಯ ಅವರು ಮುಂಬೈ ಮಹಾನಗರವನ್ನು ಬಿಟ್ಟು ಹುಟ್ಟೂರಿಗೆ ಬಂದು

(12ನೇ ಪುಟಕ್ಕೆ)

## ಡಿ. 3 ರಂದು ಆನೆಗುಡ್ಡೆ ರಥೋತ್ಸವ

ಕುಂಭಾಸಿ ಗ್ರಾಮದ ಆನೆಗುಡ್ಡೆ ಶ್ರೀ ವಿನಾಯಕ ದೇವರ ಬ್ರಹ್ಮ ರಥೋತ್ಸವ ಹಾಗೂ ಅಷ್ಟೋತ್ತರ ಸಹಸ್ರ ನಾಲಿಕೇರ ಮಹಾಗಣಪತಿಯಾಗ ಡಿಸೆಂಬರ್ 3 ರಂದು ನಡೆಯಲಿದೆ.

ರಥೋತ್ಸವದ ಪ್ರಯುಕ್ತ ನ. 30 ರಿಂದ ಧಾರ್ಮಿಕ, ಸಾಂಸ್ಕೃತಿಕ ಕಾರ್ಯಕ್ರಮಗಳು ಆರಂಭ ಗೊಳ್ಳಲಿವೆ.

ಸಾಂಸ್ಕೃತಿಕ ಕಾರ್ಯಕ್ರಮದ ಅಂಗವಾಗಿ ನ. 30 ರಂದು ಸಂಜೆ 6.30 ಕ್ಕೆ ಯಕ್ಷಗಾನ ಬಯಲಾಟ, ಡಿ. 1 ರಂದು ಬೊಂಬೆಯಾಟ, ಡಿ.2 ರಂದು ನೃತ್ಯ ವೈವಿಧ್ಯ, ಡಿ. 3 ರಂದು ಸುಗಮ ಸಂಗೀತ, ನೃತ್ಯೋತ್ಸವ, ರಾತ್ರಿ 9.30 ಕ್ಕೆ ಯಕ್ಷಗಾನ ನಡೆಯಲಿದೆ. ಎಲ್ಲಾ ಕಾರ್ಯಕ್ರಮಗಳಿಗೆ ಅನುವಂಶಿಕ ಆಡಳಿತ ಧರ್ಮದರ್ಶಿ ಕೆ.ಸೂರ್ಯನಾರಾಯಣ ಉಪಾಧ್ಯಾಯ, ಆಡಳಿತ ಮಂಡಳಿ, ಪರ್ಯಾಯ ಅರ್ಚಕರು ಭಕ್ತಾಭಿಮಾನಿಗಳನ್ನು ಆಹ್ವಾನಿಸಿದ್ದಾರೆ.

### ಉತ್ರ

ಹುಡ್ಗ ಹೇಳ್ದ–ಪ್ರಿಯೆ
ನಾನು ಮಜನೂ ನೀನು
ಲೈಲಾ
ಹುಡ್ಗಿ ಕೇಂಡ್ಳು–
ನಾ ಪಾಸು, ನೀ ಫೈಲಾ?

ಡುಂಡಿರಾಜ್

VACATION CRASH COURSE FOR SSLC
Our top Achievers of 2015
Starts on April 1st
Excellent teaching faculty
Top results
Join the NO. 1 Coaching class of Kundapura and get unparallel results
For more details visit www.sginstitutes.com
Saraswathi Group Of Institutes
Ph: 9916034605, 9141138705

ಕುಂದಾಪುರದಲ್ಲಿ 5 ದಶಕಗಳಿಂದ ನಿರಂತರ ಸೇವೆಯಲ್ಲಿರುವ
ವಸಂತ ಬೇಕರಿ
ಗ್ರಾಹಕರ ಅನುಕೂಲತೆಗಾಗಿ ಅತ್ಯಂತ ಸುಸಜ್ಜಿತವಾಗಿ ಇನ್ನೊಂದು ನೂತನ ಮಾರಾಟ ಕೇಂದ್ರವನ್ನು ಪ್ರಾರಂಭಿಸಲಾಗಿದೆ.
ಕಾರ್ಪೋರೇಶನ್ ಬ್ಯಾಂಕ್ ಬಳಿ, ಮುಖ್ಯ ರಸ್ತೆ, ಕುಂದಾಪುರ
ಫೋನ್ : 08254-230503, ಮೊ: 9448171188